# ✻ ಅಸ್ಪೃಶ್ಯತೆಯನ್ನು ಹೋಗಲಾಡಿಸುವುದು ಹೇಗೆ? ✻

**ಕೋ. ಚನ್ನಬಸಪ್ಪ**

ನ್ಯಾಯಾಧೀಶರಾಗಿದ್ದುಕೊಂಡು ಸಾಹಿತ್ಯಕ್ಷೇತ್ರದಲ್ಲೂ ವಿಶೇಷತೆಯನ್ನು ಮೆರೆದಿರುವ ವಿಖ್ಯಾತ ಲೇಖಕರು, ಕನ್ನಡಿಗರಿಗೆ ಚಿರಪರಿಚಿತರು. ಈ ಕಿರುಲೇಖನದ ಮೂಲಕ ನಮ್ಮ ದೇಶವನ್ನು ಕಿತ್ತು ತಿನ್ನುತ್ತಿರುವ ಪ್ರಮುಖ ಸಮಸ್ಯೆಯತ್ತ ಗಮನ ಸೆಳೆದಿದ್ದಾರೆ.

ಕೆಲವು ತಿಂಗಳ ಹಿಂದೆ ಖಾಸಗಿ ದೂರದರ್ಶನದಲ್ಲಿ ನಮ್ಮ ರಾಜ್ಯದ ಒಂದು ಹಳ್ಳಿಯಲ್ಲಿ ನಡೆದ ಸಂಗತಿಯನ್ನು ಪ್ರಸ್ತುತ ಪಡಿಸಲಾಯಿತು. ಹಾಸನ ಜಿಲ್ಲೆಯ ಒಂದು ಹಳ್ಳಿಯಲ್ಲಿ ಸರ್ಕಾರಿ ಶಾಲೆಯ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಮಧ್ಯಾಹ್ನದ ಬಿಸಿಯೂಟ ವ್ಯವಸ್ಥೆ ಮಾಡಲಾಗಿದೆ. ಆದರೆ ಆ ಶಾಲಾ ಬಾಲಕ ಬಾಲಕಿಯರು ಆ ಬಿಸಿ ಊಟ ಮಾಡುವುದಿಲ್ಲವೆಂದು ಹೇಳಿ ಮಾಡಿದ ಅಡುಗೆಯನ್ನು ಮುಟ್ಟಲಿಲ್ಲ. 'ಯಾಕೆ?' ಎಂದು ಟಿ.ವಿ. ಸಂದರ್ಶಕರು, ಮೈಕನ್ನು ಆ ಚಿಕ್ಕ ಚಿಕ್ಕ ಮಕ್ಕಳ ಮುಂದೆ ಹಿಡಿದಾಗ—ಹತ್ತು ಹನ್ನೆರಡು ವರ್ಷದ, ಹೊಳೆಯುವ ಅಗಲವಾದ ಕಣ್ಣುಗಳ ಆ ಬಾಲಕ ಬಾಲಕಿಯರು, ಸ್ವಚ್ಛ ಮಾತಿನಲ್ಲಿ ಕಣ್ಣರಳಿಸಿ ಹೇಳಿದರು: "ಆ ಅಡುಗೆ ಮಾಡಿದಾಕೆ ಬೇಯಿಸಿದ ಬಿಸಿಯೂಟ ತಿಂದರೆ ನಮ್ಮ ಜಾತಿ ಕೆಡ್ತದೆ; ನಮ್ಮನ್ನು ಕುಲದ ಹೊರಗೆ ಇಡ್ತಾರೆ ಅಂತ ನಮ್ಮಪ್ಪ, ನಮ್ಮಮ್ಮ ಹೇಳ್ತಾರೆ.." ಆ ಮಕ್ಕಳು ಹೇಳಿದ್ದನ್ನು ದೂರದರ್ಶನ ದಾಖಲಿಸಿ ಬಿತ್ತರಿಸಿತು! ಅಡುಗೆ ಮಾಡಿದ ಆ ತಾಯಿಯನ್ನು ಕೇಳಿದಾಗ, ಆಕೆ ಕಣ್ತುಂಬ ನೀರು ತುಂಬಿಕೊಂಡು ಯಾವ ಉದ್ವಿಗ್ನತೆ, ಕೋಪ, ಆಕ್ರೋಶವಿಲ್ಲದೆ "ನಾನು ಕೂಲಿ ನಾಲಿ ಮಾಡಿಕಂಡು ಬದುಕುತ್ತಿದ್ದೆ. ಈ ಕೆಲ್ಸ ಕೊಟ್ರು. ನಮ್ಮ ಮಕ್ಳು ಮುಂದಕ್ಕೆ ಬಂದಾವು ಅಂತ ಈ ಕೆಲ್ಸಕ್ಕೆ ಬಂದೆ. ಈಗ ಈ ಊರಿನ ಜನ ನಮ್ಮತ್ರ ಮಾತಾಡಲ್ಲ. ಅಂಗಡಿಯಲ್ಲಿ ಒಂದು ಬೆಂಕಿಪಟ್ಣ ಕೊಡಲ್ಲ" ಎಂದು ತನ್ನ ದುಃಖ ತೋಡಿಕೊಂಡಳು. ಈ ದೂರದರ್ಶನದ ಸತ್ಯಸಂಗತಿಯನ್ನು ಲಕ್ಷಾಂತರ ಜನ ನೋಡಿದರು, ಯಥಾಪ್ರಕಾರ ಸುಮ್ಮನಾದರು.

ಆ ಹಾಲುಗಲ್ಲದ ಮಕ್ಕಳ ಮುಗ್ಧ ಮನಸ್ಸಿನಲ್ಲಿ 'ಜಾತಿ ಕೆಡುವ' ಈ ವಿಷಬೀಜ ಬಿತ್ತಿದ ಭೀಕರ ಸಂಗತಿಯನ್ನು ನೋಡಿದಾಗ, ಕೇಳಿದಾಗ ಎದೆಯಲ್ಲಿ ತಳಮಳವಾಗಿರಲೇಬೇಕು. ನಮ್ಮ ಸಂವಿಧಾನದ ಬೀಜವಾಕ್ಯವೆ ಜಾತ್ಯತೀತ ರಾಜ್ಯ ಸಂಸ್ಥಾಪನೆ; ತನ್ಮೂಲಕ ಆರ್ಥಿಕ, ಸಾಮಾಜಿಕ, ರಾಜಕೀಯ ಸರಿಸಮಾನತೆಯನ್ನು ಸಾಧಿಸುವುದು. ಈ ಘನೋದ್ದೇಶದ ಸಾಧನೆ ಮಾಡಿ, ಸುಖೀರಾಜ್ಯ ಸ್ಥಾಪನೆಯ ಸಿದ್ಧಿ ಪಡೆಯುವುದು. ಈ ಉನ್ನತ ಆದರ್ಶವನ್ನು ಈಡೇರಿಸಲು ಸಂವಿಧಾನದ ೧೪ನೇ ಪರಿಚ್ಛೇದದಲ್ಲಿ ಸರಿಸಮಾನತೆಯ ಸತ್ವವನ್ನು ಸಾರಲಾಯಿತು. ೧೭ನೇ ಪರಿಚ್ಛೇದದಲ್ಲಿ ಅಸ್ಪೃಶ್ಯತೆಯನ್ನು ನಿರ್ಮೂಲಗೊಳಿಸಲು ತೀರ್ಮಾನಿಸಲಾಯಿತು. ಅಸ್ಪೃಶ್ಯತೆಯ ಆಚರಣೆ ಒಂದು ದಂಡನೀಯ ಅಪರಾಧ ಎಂಬುದಾಗಿ ಕಾನೂನು ಮಾಡಲಾಯಿತು. ಆದರೆ ಸಂವಿಧಾನ ಜಾರಿಯಲ್ಲಿ ಬಂದು ಅರುವತ್ತು ವರ್ಷಗಳು ಹತ್ತಿರವಾಗುತ್ತಿದ್ದರೂ ಇನ್ನೂ ಈ ಅಸ್ಪೃಶ್ಯತೆಯ ರಾಕ್ಷಸನ ತಾಂಡವ ಮುಚ್ಚುಮರೆಯಿಲ್ಲದೆ ನಡೆಯುತ್ತಿದೆ! ಇದಕ್ಕೆ ಏನಾದರೂ ಪರಿಹಾರ ಇದೆಯೆ?

ಅಸ್ಪೃಶ್ಯತೆ ಹಿಂದೂಧರ್ಮಕ್ಕೆ ಹಿಡಿದಿರುವ ಒಂದು ಶಾಪ ಎಂಬುದಾಗಿ ಗಾಂಧೀಜಿ ಹೇಳಿದರು. ಅದನ್ನು ಹೋಗಲಾಡಿಸಬೇಕು ಎಂಬುದಾಗಿ ಎಲ್ಲ ಪ್ರಾಜ್ಞರೂ ಒಪ್ಪುತ್ತಾರೆ. ಆದ್ದರಿಂದಲೇ ಸ್ವತಂತ್ರ ಭಾರತದ ಸಂವಿಧಾನದಲ್ಲಿಯೆ ಆ ಹೀನ ಪದ್ಧತಿಯನ್ನು ನಿರ್ಮೂಲಗೊಳಿಸಲು ತೀರ್ಮಾನಿಸಲಾಯಿತು. ಸಂವಿಧಾನಾತ್ಮಕವಾಗಿ ರಚನೆಯಾದ ರಾಷ್ಟ್ರ ಹಾಗೂ ರಾಜ್ಯ ಸರ್ಕಾರಗಳುಂಟು, ಮಂತ್ರಿ ಮಂಡಲಗಳುಂಟು, ಶಾಸಕರುಂಟು. ಅದರಂತೆಯೆ ಪ್ರಬಲವಾದ ಕಾರ್ಯಾಂಗವುಂಟು, ಉನ್ನತ ಶ್ರೇಣಿಯ ನೌಕರ ವರ್ಗವುಂಟು, ಕಂಡಲ್ಲಿ ಗುಂಡಿಕ್ಕಿ ಕೊಲ್ಲಲು ಆಜ್ಞೆ ಮಾಡುವಂಥ ಶಕ್ತಿಯುತ ಅಧಿಕಾರಿ ವರ್ಗವುಂಟು. ಶಾಸನವನ್ನು ಉಲ್ಲಂಘಿಸಿದವರಿಗೆ ಯಾವ ಶಿಕ್ಷೆಯನ್ನಾದರೂ ವಿಧಿಸುವ ನ್ಯಾಯಾಂಗವುಂಟು. ಇಷ್ಟೆಲ್ಲ ಅಧಿಕಾರ, ಅಧಿಕಾರಿಗಳಿದ್ದರೂ ಈ ಅಸ್ಪೃಶ್ಯತಾ ಪಿಡುಗನ್ನು ತೊಲಗಿಸಲು ಆಗಿಲ್ಲ. ಹಾಗೆ ಹೇಳಬೇಕೆಂದರೆ ಸ್ವಾತಂತ್ರ್ಯಾನಂತರವೆ ಸಂವಿಧಾನ ಜಾರಿಯಲ್ಲಿ ಬಂದ ಮೇಲೆಯೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ಅಧಿಕವಾಗಿ ಬೆಳೆದಿದೆ.

ಇದನ್ನು ಗಮನಿಸಿದರೆ ಅಸ್ಪೃಶ್ಯತೆಯನ್ನು ಶಾಸನದ ಮೂಲಕ ನಿರ್ಮೂಲ ಮಾಡುವುದು ಅಸಾಧ್ಯವೆಂಬುದು ಕಂಡುಬರುತ್ತಿದೆ. ಇದೊಂದು ಮನಸ್ಸಿನ ಜಾಡ್ಯ; ಅದಕ್ಕೆ ಆವರಿಸಿದ ಮಾಲಿನ್ಯ. ಮನದ ಮಾಲಿನ್ಯವನ್ನು ಮೈ ಉಜ್ಜಿ ಸ್ವಚ್ಛಗೊಳಿಸುವುದು ಅಸಾಧ್ಯ. ಮೈಗುದ್ದಿ ಮನಸ್ಸನ್ನು ತಿದ್ದುವುದು ಆಗದ ಮಾತು. ಹಾಗಾದರೆ ಈ ಸಮಸ್ಯೆಗೆ ಪರಿಹಾರ ಏನು? ಹಿಂದೂಧರ್ಮದ ಈ ಕಳಂಕವನ್ನು ನಿರ್ಮೂಲನೆ ಮಾಡುವ ಸಲುವಾಗಿ ಕಾಲಕಾಲಕ್ಕೆ ಬಂದ ಕೆಲವು ಮಠಾಚಾರ್ಯರು,

ಸಮಾಜಸುಧಾರಕರು ಬಗೆಬಗೆಯಾಗಿ ಪ್ರಯತ್ನಿಸಿದ್ದಾರೆ. ಅಂಥವರಲ್ಲಿ ಹನ್ನೆರಡನೆಯ ಶತಮಾನದ ಮಹಾನುಭಾವಿ ಬಸವಣ್ಣ ಒಂದು ಮಹಾದ್ಭುತ ಪರಿಹಾರೋಪಾಯವನ್ನು ಪ್ರಯೋಗಿಸಿ ಬಹುಮಟ್ಟಿಗೆ ಯಶಸ್ವಿಯಾದ. ಆ ಪರಿಹಾರೋಪಾಯವೆಂದರೆ, ಸಮಾಜದಿಂದ ತಿರಸ್ಕರಿಸಲ್ಪಟ್ಟಿದ್ದ ಆ ದಲಿತರನ್ನು ಆತ್ಮಸಾತ್, ಎಂದರೆ ತನ್ನಂತೆಯೆ ಬಗೆದು, ಅವರ ಅಂತರಂಗ ಬಹಿರಂಗ ಶುದ್ಧಿ ಮಾಡಿದ. ಆ ಶುದ್ಧಿ ಕಾರ್ಯದಲ್ಲಿ ಬ್ರಾಹ್ಮಣ ಮೊದಲಾಗಿ ಅಂತ್ಯಜ ಕಡೆಯಾಗಿ ಸರ್ವರನ್ನೂ ತನ್ನ ಇಷ್ಟದೈವವೆಂದೇ ಆತ ಅಕ್ಷರಶಃ ಕಂಡ. ಭಕ್ತರ ಕುಲ ಯಾವುದೆಂದು ಕೇಳಿದರೆ ತಲೆದಂಡ ಕೊಡುತ್ತೇನೆ ಎಂದು ತನ್ನ ಇಷ್ಟದೈವದ ಆಣೆಯಿಟ್ಟು ಅದರಂತೆ ಆಚರಿಸಿದ ಮಹಾನುಭಾವಿ ಬಸವಣ್ಣ. ಅವನ ಈ ಪರಿಹಾರೋಪಾಯ ಯಾವ ಮಟ್ಟಕ್ಕೆ ಹೋಯಿತೆಂದರೆ ಅಂತ್ಯಜನ ಮಗನಿಗೆ ಬ್ರಾಹ್ಮಣನ ಮಗಳನ್ನು ಮದುವೆ ಮಾಡಿಸುವ ಮಟ್ಟಕ್ಕೆ ಹೋಯಿತು. ಅದನ್ನು ಅಂದಿನ ಬಸವ ಬಳಗ, ಆ ಸಮಾಜ ಒಪ್ಪಿ, ಎಲ್ಲ ಹೀನ ಜಾತಿಯವರನ್ನು ಎದೆಗಪ್ಪಿಕೊಂಡು ಒಂದಾದರು. ಅಂಥ ಮಾನಸಿಕ ಪರಿವರ್ತನೆಯನ್ನು ತರುವ ಪ್ರಯತ್ನ ಈಗ ಮತ್ತೆ ಆಗಬೇಕಾಗಿದೆ. ಅದು ಶಾಸನದಿಂದಷ್ಟೆ ಆಗುವ ಮಾತಲ್ಲ.

ಇದೇ ಭಾವನೆಯನ್ನು ತಿಳಿಸುವ ಶ್ರೀರಾಮಕೃಷ್ಣರು ಹೇಳುತ್ತಿದ್ದ ಕೃಷ್ಣಕಿಶೋರ್ ಎಂಬ ಭಕ್ತನ ಉದಾಹರಣೆ ಉಲ್ಲೇಖಯೋಗ್ಯ. ಆತ ಒಮ್ಮೆ ಬೃಂದಾವನದಲ್ಲಿ ಏಕಾಂಗಿಯಾಗಿ ಬಿಸಿಲಿನಲ್ಲಿ ನಡೆದುಹೋಗುತ್ತಿದ್ದ. ಬಾಯಾರಿಕೆ ಆಗಿತ್ತು. ಎದುರಿಗೆ ಒಬ್ಬ ವ್ಯಕ್ತಿ ನೀರು ತುಂಬಿದ ಬಿಂದಿಗೆ ಹೊತ್ತು ಬರುತ್ತಿದ್ದ. ಈತ ಕುಡಿಯಲು ನೀರು ಕೊಡು ಎಂದು ಕೇಳಿದ. ಆ ವ್ಯಕ್ತಿ "ಸ್ವಾಮಿ, ನಾನು ಮ್ಲೇಚ್ಛ, ನೀರು ಕೊಡಲಾರೆ; ಪಾಪ ಬಂದೀತು" ಎಂದ. ಅದಕ್ಕೆ ಆ ಭಕ್ತ ಹೇಳಿದ, "ಅಯ್ಯಾ, ಶಿವ, ಶಿವ ಎಂದು ಒಮ್ಮೆ ಉಚ್ಚರಿಸು." ಆ ವ್ಯಕ್ತಿ ಶಿವನ ನಾಮವನ್ನು ಉಚ್ಚರಿಸಿದ. ಆಗ ಆ ಭಕ್ತ—"ಈಗ ನೀರು ಕೊಡು, ನೀನು ಭಕ್ತನಾದೆ. ನಿನಗೆ ಈಗ ಯಾವ ಜಾತಿಯ ಕಳಂಕವೂ ಇಲ್ಲ, ಪರಿಶುದ್ಧನಾಗಿರುವೆ" ಎಂದು ಬೊಗಸೆ ಒಡ್ಡಿದ. ಆ ಅಂತ್ಯಜಾತಿಯವನು ಸಂತೋಷದಿಂದ ನೀರು ನೀಡಿದ. ಭಕ್ತ ಕೃಷ್ಣಕಿಶೋರ್ ತನ್ನ ಬಾಯಾರಿಕೆಯನ್ನು ನೀಗಿಸಿಕೊಂಡ. ಇಂಥ ಭಾವನೆಯಿದ್ದರೆ, ನೈಜಭಕ್ತಿ ಶ್ರದ್ಧೆಗಳಿದ್ದರೆ ಅಸ್ಪೃಶ್ಯತೆಯ ಮಹಾಮಾರಿಯನ್ನು ಮುಂದಿಕ್ಕಬಹುದು. ಶ್ರೀರಾಮಕೃಷ್ಣರು ಹೇಳುತ್ತಿದ್ದರು, "ಭಕ್ತರಲ್ಲಿ ಯಾವುದೇ ಭೇದವಿಲ್ಲ. ಜಾತಿ, ಕುಲ, ಗೋತ್ರ—ಈ ವ್ಯತ್ಯಾಸಗಳು ಭಕ್ತರಲ್ಲಿ ಇಲ್ಲ." ಈ ಭಾವನೆ ಎಲ್ಲರ ಮನಗಳಲ್ಲೂ ಅವತರಿಸದಿದ್ದರೆ ಈ ಮಹಾವ್ಯಾಧಿಯನ್ನು ಹೋಗಲಾಡಿಸಲು ಸಾಧ್ಯವಿಲ್ಲ. ✪

## ಸಂಕುಚಿತ ಮನೋಭಾವ

ಒಂದೂರಿನ ಮಧ್ಯ ಒಂದು ದೊಡ್ಡ ಕಾರ್ಖಾನೆ ಇತ್ತು. ಎತ್ತರದ ಹೊಗೆಕೊಳವೆಗಳಿಂದ ಅದು ಎಲ್ಲರ ಗಮನ ಸೆಳೆಯುತ್ತಿತ್ತು. ಸಾವಿರಾರು ಜನ ಅಲ್ಲಿ ದುಡಿಯುತ್ತಿದ್ದರು. ಒಂದು ದಿನ ಇದ್ದಕ್ಕಿದ್ದಂತೆ ಕಾರ್ಖಾನೆಯಲ್ಲಿ ಜೋರಾಗಿ ಸಪ್ಪಳವಾಗಿ ಗೋಡೆಗಳೆಲ್ಲ ಕುಸಿದು ಬಿದ್ದವು. ನೌಕರರೆಲ್ಲ ಚೆಲ್ಲಾಪಿಲ್ಲಿಯಾಗಿ ಓಡಲಾರಂಭಿಸಿದರು. ಅನೇಕರು ಗೋಡೆಗಳ ಅಡಿಯಲ್ಲಿ ಸಿಕ್ಕಿಬಿದ್ದರು. ಅನೇಕರಿಗೆ ಗಾಯಗಳಾಗಿದ್ದವು. ತುರ್ತುಚಿಕಿತ್ಸೆ ಹಾಗೂ ರಕ್ಷಣೆಯ ಕೆಲಸ ಭರದಿಂದ ಸಾಗಿತ್ತು. ನೂರಾರು ಜನ ಸೇವೆ ಮಾಡುತ್ತಿರುವಾಗ ಅವರೊಂದಿಗೆ ಕೈಜೋಡಿಸುವುದನ್ನು ಬಿಟ್ಟು ಒಬ್ಬ ಯುವಕ ಕೈಕಟ್ಟಿಕೊಂಡು ಎಲ್ಲವನ್ನೂ ಸುಮ್ಮನೆ ನೋಡುತ್ತಿದ್ದ. ಆಗ ಮತ್ತೊಬ್ಬ ವ್ಯಕ್ತಿ ಅವನ ಬಳಿಗೆ ಬಂದು ಭುಜ ತಟ್ಟಿ ಹೇಳಿದ, "ನಿನ್ನ ತಮ್ಮ ಅಲ್ಲಿ ಒಳಗೆ ಸಿಕ್ಕಿಕೊಂಡು ಪರದಾಡುತ್ತಿದ್ದಾನೆ." ಯುವಕ, 'ಹೌದೇ!' ಎನ್ನುತ್ತಾ ತಕ್ಷಣವೇ ತನ್ನ ತಮ್ಮನನ್ನು ಕಾಪಾಡಲು ಜೋರಾಗಿ ಅಳುತ್ತ ಮುನ್ನುಗ್ಗಿದ. "ಇನ್ನೂ ಹೆಚ್ಚು ಹೊತ್ತು ಆಗಿಲ್ಲ, ಬದುಕಿರಬಹುದು" ಎನ್ನುವ ಆಸೆಯಿಂದ ಭಗ್ನಾವಶೇಷಗಳನ್ನೆಲ್ಲ ಅಗೆಯಲಾರಂಭಿಸಿದ. ಕೇವಲ ತಮ್ಮವರಿದ್ದರೆ ಮಾತ್ರ ಕಾಪಾಡಲು ಮುಂದಾಗುವ ಇಂತಹವರು ಪರರ ಸಾವುನೋವುಗಳಿಗೆ ಹೇಗೆ ಸ್ಪಂದಿಸಿಯಾರು?

## ಮುಂದೂಡುವವರೇ ಎಚ್ಚರಿಕೆ!

ನಯಾಗರಾ ನದಿಯ ಬಳಿ ಒಬ್ಬ ವ್ಯಕ್ತಿ ನಿಂತಿದ್ದ. ಚಳಿಗಾಲವಾದ್ದರಿಂದ ನದಿಯಲ್ಲಿ ಮಂಜಿನ ಗಡ್ಡೆಗಳು ತೇಲುತ್ತಿದ್ದವು. ಮೇಲೆ ಹಾರುತ್ತಿದ್ದ ಒಂದು ದೊಡ್ಡ ಹದ್ದು ಇದ್ದಕ್ಕಿದ್ದಂತೆ ಕೆಳಗೆ ಬಂದು ನದಿಯ ಮೇಲಿದ್ದ ಒಂದು ಮಂಜಿನಗಡ್ಡೆಯ ಮೇಲೆ ಕುಳಿತುಕೊಂಡಿತು. ಈ ವ್ಯಕ್ತಿ ಆಶ್ಚರ್ಯದಿಂದ ನೋಡುತ್ತಿದ್ದಂತೆ ಆ ಗಡ್ಡೆಯಲ್ಲಿದ್ದ ಕೊಳೆತ ಮಾಂಸದ ತುಂಡನ್ನು ತಿನ್ನಲು ಪ್ರಯತ್ನಿಸಲಾರಂಭಿಸಿತು. ಮುಂದೆ ಒಂದು ದೊಡ್ಡ ಪ್ರಪಾತವಿತ್ತು. ಹದ್ದು ಭಾವಿಸಿತು, "ಭಯವೇನು? ಪ್ರಪಾತ ಬಂದಾಗ ರೆಕ್ಕೆ ಬಿಚ್ಚಿ ಹಾರಿಹೋಗುವೆ! ಈಗೇನು ಅವಸರ?" ಮಂಜಿನಗಡ್ಡೆ ತೇಲುತ್ತ ತೇಲುತ್ತ ಪ್ರಪಾತದ ಬಳಿಗೆ ಬಂದುಬಿಟ್ಟಿತು. ನೀರಿನ ರಭಸಕ್ಕೆ ಸಿಲುಕಿ ಬೀಳಲಾರಂಭಿಸಿದಾಗ ರೆಕ್ಕೆ ಬಿಚ್ಚಿ ಹಾರಲು ಪ್ರಯತ್ನಿಸಿತು. ಪಾಪ! ಅದರ ಕಾಲುಗಳು ಆ ಮಂಜಿನ ಗಡ್ಡೆಯಲ್ಲಿ ಹಿಮಗಟ್ಟಿಹೋಗಿದ್ದವು. ಶಕ್ತಿ, ಸಾಮರ್ಥ್ಯವಿದ್ದ ಹದ್ದಿಗೂ ಆ ದೊಡ್ಡ ಹಿಮಗಡ್ಡೆಯ ಹಿಡಿತದಿಂದ ತನ್ನನ್ನು ಬಿಡಿಸಿಕೊಳ್ಳಲಾಗಲೇ ಇಲ್ಲ. ಅಂತೆಯೇ ನಮ್ಮಲ್ಲಿ ಎಷ್ಟೇ ಸಾಮರ್ಥ್ಯವಿದ್ದರೂ ಮುಂದೂಡುವ ಅಭ್ಯಾಸದಿಂದ ನಾವು ಎಲ್ಲ ಅನಾಹುತಗಳಿಗೆ ಒಳಗಾಗುತ್ತೇವೆ. ✪